**ಅ.ದಾವಾ ನಂಬರ್ 82/2021** **ಪಿ.ಡಬ್ಲ್ಯೂ - 1**

**ದಿನಾಂಕಃ 22/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಹೆಚ್.ಎಸ್.ಆರ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಹಿಂದೆ 2014 ರಲ್ಲಿ ನನ್ನ ತಾಯಿ ಜೀವಾನಂಶಕ್ಕೆ ಕೋರಿ ಒಂದು ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜೀವಾನಂಶ ಕೋರಿ ನನ್ನ ತಾಯಿ 2020 ರಲ್ಲಿ ಪ್ರಕರಣ ಸಲ್ಲಿಸಿರುತ್ತಾರೆ. ನನ್ನ ತಾಯಿ 1 ನೇ ಪ್ರತಿವಾದಿಯನ್ನು ಎಷ್ಟನೇ ಇಸವಿಯಲ್ಲಿ ಮದುವೆಯಾಗಿರುತ್ತಾರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ನನ್ನ ತಾಯಿಯನ್ನು 1991 ರಲ್ಲಿ ಮದುವೆಯಾಗಿರುತ್ತಾರೆ ನಾನು 1994 ರಲ್ಲಿ ಹುಟ್ಟಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಾಯಿಯನ್ನು ಮದುವೆಯಾಗಿರುವ ಬಗ್ಗೆ ಒಂದು ಫೋಟೋ ಇದೆ ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿ ಮಗಳು ಎಂದು ಹೇಳಲು ನಾನು ತಹಶೀಲ್ದಾರವರಿಂದ ಪಡೆದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ.

1 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಸುಮಾರು 20 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮೊದಲನೇ ಹೆಂಡತಿಗೆ 3 ಜನ ಮಕ್ಕಳು. ಅವರೆಲ್ಲಾರು ಮನೆಯಲ್ಲಿ ಇರುತ್ತಾರೆ ಅದರಲ್ಲಿ ಒಬ್ಬನು ಮೃತಪಟ್ಟಿರುತ್ತಾನೆ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು ಅವರು ಯಾವುದೇ ಕೆಲಸವನ್ನು ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಯ ಒಬ್ಬಳು ಮಗಳು ಬುದ್ದಿಮಾಂಧ್ಯರಾಗಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಸುಮಾರು 65 ವರ್ಷ ಆಗಿರಬಹುದು. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು, ಒಬ್ಬಳು ಮಗಳು ಬುದ್ದಿಮಾಂಧ್ಯ ಆಗಿರುವುದರಿಂದ ಅವಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇದುವರೆಗೂ ನನ್ನ ತಂದೆ ನನ್ನನ್ನು ಹಾಗೂ ನನ್ನ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಸುಮಾರು 15 ವರ್ಷಗಳ ಕಾಲ ಚೆನ್ನಾಗಿ ಇದ್ದರು. 1 ನೇ ಪ್ರತಿವಾದಿಗೆ ನನ್ನ ತಾಯಿ ಅಕ್ಕನ ಮಗಳು ಎಂದರೆ ಸರಿ. 1 ನೇ ಪ್ರತಿವಾದಿ ಮನೆಗೆ ನನ್ನ ತಾಯಿ ತುಂಬಾ ಸಲುಗೆಯಿಂದ ಬಂದು-ಹೋಗುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನಾವು ಪ್ರಸ್ತುತ ದಾವೆಯನ್ನು ವಿಭಾಗ ಮತ್ತು ಪ್ರತ್ಯೇಕ ಸ್ವಾದೀನಕ್ಕಾಗಿ ಸಲ್ಲಿಸಿದ್ದೇವೆ. ದಾವಾ ಆಸ್ತಿಯ ಖಾತಾ ನಂಬರ್ 513/465 ಆಗಿರುತ್ತದೆ, ದಾವಾ ಆಸ್ತಿಯ ಖಾತಾ ಸಂಖ್ಯೆ 521/473 ಆಗಿರುತ್ತದೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ಹೇಳಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂಬುದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 1979 ರಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಸ್ವಯಾರ್ಜಿತವಾಗಿ ಕೊಂಡುಕೊಂಡಿರುವ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ